ಶ್ರೀ ಎಂ. ನಾಗಪ್ಪ.—ಸ್ವಾಮಿ (ಅ) ಗೆ ಉತ್ತರವಾಗಿ 9 ಪ್ರಕರಣಗಳನ್ನು ಹಿಡಿದಿದ್ದೇವೆ ಎಂದು ಹೇಳಿದ್ದೀರಿ. ಆ 9 ಪ್ರಕರಣಗಳಲ್ಲಿ ಹಿಡಿದಂಥ ಮಾಲು ಎಷ್ಟು ? ಅದು ಹೆಚ್ಚಾಗಿ ವಕ್ಕಲಿಗರು ಮಾಡತಕ್ಕ ವ್ಯವಹಾರದಿಂದ ಹಿಡಿದಿದ್ದೀರಿ, ವ್ಯಾಪಾರ ಮಾಡತಕ್ಕವರಿಂದ ಹಿಡಿದಿಲ್ಲ ಎಂದು ಈ ಪ್ರಕರಣಗಳಲ್ಲಿ ತಿಳಿದು ಬರುತ್ತದೆ ಅಲ್ಲವೆ ? ದಯವಿಟ್ಟು ಹೇಳಬೇಕು.

ಶ್ರೀ ಬಿ. ಡಿ. ಜತ್ತಿ.—ರೈತರು ಹೆಚ್ಚಿಗೆ ಇಲ್ಲ. ವರ್ತಕರು 9. ಆ 9 ಕೇಸಿನಲ್ಲಿ 5 ಕೇಸು ಎವಿಕ್ಷನ್ ಆಗಿದೆ. ಉಳಿದ 4 ಕೇಸುಗಳು ಹೆಂಡಿಂಗ್ ಫೈಲ್‌ನಲ್ಲಿ ಇವೆ. ವಿವರಗಳನ್ನು ಬೇಕಾದರೆ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಹಾರಾಷ್ಟ್ರ ಬಾರ್ಡರ್ ಮಾತ್ರ ಅಲ್ಲ. ಮೈಸೂರು ಕೇರಳ ಬಾರ್ಡರ್‌ನಲ್ಲೂ ಸಹಿತ ಇದೇರೀತಿಯಾಗಿ ಬೇಕಾದಷ್ಟು ಆಹಾರಧಾನ್ಯಗಳು ಬೇರೆ ಕಡೆ ಹೋಗುತ್ತಾ ಇವೆ. ಸರಿಯಾದಂಥ ಬಂದೋಬಸ್ತಿಗೆ ತಕ್ಕಂಥ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ತಮ್ಮ ಮೇಲೆ ಆರೋಪಣೆ ಇದೆ ಎಂದು ಗೊತ್ತಿದೆಯೇ ?

ಶ್ರೀ. ಬಿ. ಡಿ. ಜತ್ತಿ.—ಆರೋಪಣೆ ಮಾಡುವುದು ಯಾರು ಬೇಕಾದರೂ ಮಾಡಬಹುದು. ಅದು ಇಲ್ಲದಂತೆ ಇಲ್ಲ. ಕೆಲವೆಡೆಗೆ ಹೋಗುತ್ತದೆ, ಏನೂ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ.

Sri DIGAMBARA RAO B. KALMANKAR.—May I know the vehicle numbers and the names of their owners ?

Sri B. D. JATTI.—Can I read the whole list ? Or can I keep it on the table ?

Mr. DEPUTY SPEAKER.—The hon'ble Minister may keep it on the Table of the House *.

ಶ್ರೀ ಎಂ. ನಾಗಪ್ಪ.—ಗುಲಬರ್ಗ, ಬೀದರ್ ಜಿಲ್ಲೆಯಲ್ಲಿ ಮೊನ್ನೆ ದಿವಸ ಒಂದು ಲಾರಿಯನ್ನು ತಹಸೀಲ್ದಾರರು ಬೆನ್ನಟ್ಟಿ ಹೋಗಿ ಡ್ಯಾಷ್ ಹೊಡೆದು ಸತ್ತು ಹೋಗಿರುವ ಪ್ರಸಂಗ ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಬಿ. ಡಿ. ಜತ್ತಿ.—ನಮ್ಮ ಮುಂದಿರುವ ಪ್ರಶ್ನೆಗೆ ನಿಮಗೆ ಉಪಪ್ರಶ್ನೆಗೆ ಸಂಬಂಧ ಆಗುವುದಿಲ್ಲ ಎಂದು ಕಾಣುತ್ತದೆ.

** ** ** ** **

Underground Drainage Scheme in Tumkur

384. **Sri B. P. GANGADHAR** (Tumkur).—

Will the Minister for Home and Municipal Administration be pleased to state :—

(*a*) whether the Tumkur Town Municipality has prepared plan and estimate for the underground drianage in Tumkur ;

(*b*) the stage at which the request of the Municipality for the underground drainage is pending and before whom and since how long ;

(*c*) when the work for the above project will be started and by what time it will be completed ?

---

* Copy placed in the Mysore Legislature Library.

** Matter expunged as ordered by the Chair.

A.—Sri R. M. PATIL (Minister for Home and Municipal Administration).—

(*a*) and (*b*) Plans and Estimates amount to Rs. 21.18 lakhs are under finalisation by the P. W. D.

(*c*) The work will be started as soon as the scheme is sanctioned

ಶ್ರೀ ಬಿ. ಪಿ. ಗಂಗಾಧರ್.—ತುಮಕೂರಿನ ಒಳಚರಂಡಿಯ ವಿಚಾರ ಸುಮಾರು ಹತ್ತಾರು ವರ್ಷದಿಂದ ಮುಂದೂಡುತ್ತಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri R. M. PATIL.—This matter is first mooted in 1962 by the Tumkur Municipal Council. On account of its financial difficulties and due to its then unsound position of the finances, the Government did not approve the underground drainage scheme in 1964. Again this matter has been mooted in 1967. The same difficulty is there. However, this matter is under consideration of the Chief Engineer.

1-30 P.M.

Sri B. P. GANGADHAR.—When you say that financial position is not sound, may I know what exactly you mean ?

Sri R. M. PATIL.—The Municipal Council is indifferent towards recovery.

ಶ್ರೀ ಬಿ. ಪಿ. ಗಂಗಾಧರ್.—ಈಗ ತಾವು ಹೇಳುತ್ತಿರುವ ಅಂಕ ಅಂಶಗಳು ಆ ಮುನಿಸಿಪಾಲಿಟಿಯವರನ್ನು ದೂಷಿಸುವುದಕ್ಕಾಗಿ ಹೇಳುತ್ತಿರುವ ಅಂಕಿಗಳಲ್ಲವೇ ?

Sri R. M. PATIL.—Government is examining so far as the administration of the Municipal Council is concerned. This is one of the important feature against it.

ಶ್ರೀ ಬಿ. ಪಿ. ಗಂಗಾಧರ್.—ಅವರು ಸರ್ಕಾರಕ್ಕೆ ಕೊಡಬೇಕಾದ ಹಣ ಮತ್ತು ಬಡ್ಡಿ ಎರಡನ್ನೂ ಕೊಟ್ಟಿದ್ದಾರೋ ಇಲ್ಲವೋ ?

Sri R. M. PATIL.—That is an entirely different matter. Mearly because they have paid Government dues, that does not necessarily mean that the financial position is sound so as to take a burden of 21 lakhs.

ಶ್ರೀ ಬಿ. ಪಿ. ಗಂಗಾಧರ್.—ಅವರು ಆ ಕೆಲಸಕ್ಕೆ 21 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿದ್ದರೆ ಅದಕ್ಕೆ ಸರ್ಕಾರದವರು ಸಹಾಯ ಕೊಟ್ಟಿದ್ದರೆ ಆ ಕೆಲಸವಾಗುತ್ತಿರಲಿಲ್ಲವೇ ? ಅವನ್ನು ತಾವು ಆಲೋಚನೆ ಮಾಡಿದ್ದೀರಾ ?

Sri R. M. PATIL.—Sir, my friend has not understood the implication of the whole question. Mere sanctioning of the scheme of under-ground drainage will not be enough unless there is adequate water supply to drain out the drains.

ಶ್ರೀ ಬಿ. ಪಿ. ಗಂಗಾಧರ್.—ಪರಿಸ್ಥಿತಿ ದಿನ ದಿನಕ್ಕೂ ಅಲ್ಲಿ ಹದಗೆಡುತ್ತಿದೆ ಎಂದು ಆ ವಿಷಯವನ್ನು ತಮ್ಮ ಗಮನಕ್ಕೂ ಮತ್ತು ಹಿಂದಿದ್ದ ಮಂತ್ರಿಗಳ ಗಮನಕ್ಕೂ ಆ ಚೌನಿವರು ತಂದಿರಲಿಲ್ಲವೇ ?

Sri R. M. PATIL.—There is a proposal to have a comprehensive water supply scheme for Tumkur costing 28,75,000. That is also under examination.

ಶ್ರೀ ಬಿ. ಪಿ. ಗಂಗಾಧರ್.—ಇನ್ನೆಷ್ಟು ವರ್ಷಗಳಲ್ಲಿ ಸರ್ಕಾರದವರು ಈ ಕೆಲಸವನ್ನು ಮುಗಿಸಬೇಕೆಂದಿದ್ದಾರೆ ?

Sri R. M. PATIL.—The entire scheme will have to be taken up.

ಶ್ರೀ ಬಿ. ಪಿ. ಗಂಗಾಧರ್.—ಇದನ್ನು ಮುಗಿಸಲು ಒಂದು ಕಾಲ ನಿಗದಿಯನ್ನು ಮಾಡಲು ಸಾಧ್ಯವಿಲ್ಲವೇ ?

Sri R. M. PATIL.—It depends upon the availability of funds. Any way this year it will be finalised.

Providing of Electricity to Villages and wells in Muddebihal Taluk

385. Sri S. M. GUREDDI (Muddebihal).—

Will the Minister for Public Works be pleased to state :—

(*a*) the number of villages and wells in Muddebihal Taluk in respect of which the Mysore Electricity Board had a scheme for providing electricity during 1967-68 ;

(*b*) the number of villages and wells to which electricity has been provided so far ?

A.—Sri VEERENDRA PATIL (Minister for Public Works).—

(*a*) (i) 5 Villages.

(ii) 25 Wells.

(*b*) Two villages are electrified.

ಶ್ರೀ ಎಸ್. ಎಂ. ಗುರೆಡ್ಡಿ.—ವಿದ್ಯುಚ್ಛಕ್ತಿ ಮಂಡಲಯವರ ಯೋಜನೆಯಲ್ಲಿ 5 ಗ್ರಾಮಗಳು ಮತ್ತು 25 ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕ ಕಾರ್ಯಕ್ರಮ ಇದ್ದರೂ ಕೇವಲ ಎರಡು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ ಎಂದಿದೆ. ಆ ಗ್ರಾಮಗಳು ಯಾವುವು ಮತ್ತು ಭಾವಿಗಳಿಗೆ ಒದಗಿಸದೆ ಇರುವುದಕ್ಕೆ ಕಾರಣವೇನು ?

†ಶ್ರೀ ವೀರೇಂದ್ರಪಾಟೀಲ್.—ಮುದ್ದೆಬಿಹಾಳ್ ನ ತ್ತು ತಾಳಿಕೋಟೆ.

ಶ್ರೀ ಎಸ್. ಎಂ. ಗುರೆಡ್ಡಿ.—5 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕ ಯೋಜನೆಯಿದ್ದರೂ—1966ರಲ್ಲಿ ಒಂದೂರಿಗೂ ಮತ್ತು 1967ರಲ್ಲಿ ಒಂದೂರಿಗೂ ವಿದ್ಯುಚ್ಛ್ ್ತಿಯನ್ನು ಒದಗಿಸಲಾಗಿದೆ. 5 ಗ್ರಾಮಗಳಿಗೂ ಒದಗಿಸಲು ಇದ್ದ ತೊಂದರೆ ಏನು ?

ಶ್ರೀ ವೀರೇಂದ್ರಪಾಟೀಲ್.—5 ಗ್ರಾಮಗಳಿಗೆ ಒದಗಿಸಬೇಕೆಂಬ ಯೋಜನೆಯನ್ನು ಹಾಕಿ ಕೊಂಡರು. ಆದರೆ ಅವರಲ್ಲಿ ಅದಕ್ಕೆ ಹಣದ ಅಭಾವ ಬಂದುದರಿಂದ ಎಲ್ಲಾ ಗ್ರಾಮಗಳಿಗೂ ಮುಗಿಸಲಕ್ಕೆ ಆಗಲಿಲ್ಲ.

ಶ್ರೀ ಎಚ್. ಬಿ. ಹ್ವಾಲನಯ್ಯ.—ವಿದ್ಯುಚ್ಛಕ್ತಿ ಮಂಡಲಯವರು ಇಂತಿಷ್ಟು ಗ್ರಾಮಗಳಿಗೆ ಇಂತಿಷ್ಟು ಅವಧಿಯಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂಬ ಯೋಜನೆಯನ್ನು ಅವರೇ ತಯಾರು ಮಾಡಿಕೊಳ್ಳುತ್ತಾರೋ ಅಥವಾ ಸರ್ಕಾರದವರೇನಾದರೂ ಒಂದು ಡೈರೆಕ್ಷನ್ನನ್ನು ಕೊಡುತ್ತಾರೋ ಅಥವಾ ಆಯಾಯ ಸ್ಥಳದ ಪರಿಸ್ಥಿತಿ ನೋಡಿಕೊಂಡು ಆ ಕೆಲಸಗಳನ್ನು ಮಾಡಲು ಅಲ್ಲಿನ ತಾಲ್ಲೂಕ್ ಬೋರ್ಡಿನವರು ಅಥವಾ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡಿನವರೇನಾದರೂ ಸಲಹೆ ಗಳನ್ನು ನೀಡುತ್ತಾರೋ ?